ಕರ್ನಾಟಕ ಸರ್ಕಾರ

ತಾಂತ್ರಿಕ ಶಿಕ್ಷಣ ಇಲಾಖೆ

DTE-ADMI0ACM1/10/2022

ಆಯುಕ್ತರ ಕಛೇರಿ,
ತಾಂತ್ರಿಕ ಶಿಕ್ಷಣ ಭವನ,
ಅರಮನೆ ರಸ್ತೆ, ಬೆಂಗಳೂರು-560 001.
ದಿನಾಂಕ:05-03-2022.

**--:: ಹಿಂಬರಹ ::-**

2021-22ನೇ ಸಾಲಿಗೆ ಲ್ಯಾಟರಲ್ ಎಂಟ್ರಿ ಮೂಲಕ ಬಿ.ಇ 2ನೇ ವರ್ಷ/3ನೇ ಸೆಮಿಸ್ಟರ್ ಇಂಜಿನಿಯರಿಂಗ್ ಕೋರ್ಸುಗಳ ಪ್ರವೇಶಕ್ಕೆ ಸಂಬಂಧಿಸಿದ ಸರ್ಕಾರದ ಆದೇಶ ಸಂ. ಇಡಿ 36 ಡಿಟಿಇ 2022, ದಿ:04-03-2022ನ್ನು ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಈ ಕೆಳಕಂಡವರಿಗೆ ಕಳುಹಿಸಿಕೊಡಲಾಗಿದೆ.

05/03/2022

ನಿರ್ದೇಶಕರು
ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು

5/3/22

ಇವರಿಗೆ,

ರಾಜ್ಯದ ಎಲ್ಲಾ ಅನುದಾನಿತ ಹಾಗೂ ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳ ಪ್ರಾಂಶುಪಾಲರುಗಳಿಗೆ,

3771398/22

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** 2021–22ನೇ ಸಾಲಿನಿಂದ ಡಿಪ್ಲೋಮಾಧಾರಕರುಗಳಿಗೆ ಲ್ಯಾಟರಲ್ ಎಂಟ್ರಿ ಮೂಲಕ ಬಿ.ಇ. 2ನೇ ವರ್ಷದ/3ನೇ ಸೆಮಿಸ್ಟರ್ ಪ್ರವೇಶ ಪರೀಕ್ಷೆ ಹಾಗೂ ಸೀಟು ಹಂಚಿಕೆ ಪ್ರಕ್ರಿಯೆಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ ನಡೆಸುವ ಬಗ್ಗೆ.

**ಓದಲಾಗಿದೆ:**
1. ಸರ್ಕಾರದ ಆದೇಶ ಸಂಖ್ಯೆ ಇಡಿ 103 ಟಿಇಸಿ 2014, ದಿನಾಂಕ:17.07.2014.
2. ಸರ್ಕಾರದ ಸೇರ್ಪಡೆ ಆದೇಶ ಸಂಖ್ಯೆ. ಇಡಿ 103 ಟಿಇಸಿ 2014, ದಿನಾಂಕ:25.08.2014.
3. ಸರ್ಕಾರದ ಆದೇಶ ಸಂಖ್ಯೆ:ಇಡಿ 52 ಟಿಇಸಿ 2019, ದಿನಾಂಕ:15.06.2019
4. ಆಯುಕ್ತಾಲಯದ ಏಕ ಕಡತ ಸಂಖ್ಯೆ: DTE–ADMI0ACM1/10/2022–JD–DEPT TECH EDUCATION (679665)

ಸಂ. 4318
ತಾ. 5/3/22

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಸರ್ಕಾರಿ ಆದೇಶದಲ್ಲಿ 2012–13ನೇ ಸಾಲಿನಿಂದ ಲ್ಯಾಟರಲ್ ಎಂಟ್ರಿ ಮೂಲಕ ಬಿ.ಇ. 2ನೇ ವರ್ಷ/3ನೇ ಸೆಮಿಸ್ಟರ್ (ಆರ್ಕಿಟೆಕ್ಚರ್ ಡಿಪ್ಲೋಮಾಧಾರಕರುಗಳಿಗೆ ಪ್ರಥಮ ವರ್ಷದ ಬಿ.ಆರ್ಕಿಟೆಕ್ಚರ್ ಕೋರ್ಸಿಗೆ) ಕೋರ್ಸುಗಳ ಪ್ರವೇಶಕ್ಕೆ ಸಂಬಂಧಿಸಿದಂತೆ ಅರ್ಹ ಡಿಪ್ಲೋಮಾ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಿ ಅಧಿಸೂಚನೆ ಹೊರಡಿಸಲು ಹಾಗೂ ಅರ್ಹ ಡಿಪ್ಲೋಮಾ ಅಭ್ಯರ್ಥಿಗಳಿಂದ ಅರ್ಜಿಯನ್ನು ನೇರವಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರವೇ ಪಡೆಯಲು ಹಾಗೂ ಡಿಪ್ಲೋಮಾಧಾರಕರುಗಳಿಗೆ ಸಿಇಟಿ ಪರೀಕ್ಷೆ ನಡೆಸಿ ಅಭ್ಯರ್ಥಿಯ ಅರ್ಹತಾ ಪರೀಕ್ಷೆ ಹಾಗೂ ಸಿಇಟಿಯಲ್ಲಿ ಪಡೆದ ಅಂಕಗಳನ್ನು ಸಮಾನವಾಗಿ ಪರಿಗಣಿಸಿ ಸರ್ಕಾರವು ಹೊರಡಿಸುವ ಸೀಟ್ ಮ್ಯಾಟ್ರಿಕ್ಸ್ ಅನ್ವಯ ಮೆರಿಟ್ ಪಟ್ಟಿ ತಯಾರಿಸಿ ಸೀಟು ಹಂಚಿಕೆ ಪ್ರಕ್ರಿಯೆಯನ್ನು ಮೀಸಲಾತಿಯನ್ವಯ ಹಾಲಿ ಇರುವ ಕರ್ನಾಟಕ ವೃತ್ತಿ ಶಿಕ್ಷಣ ಕೋರ್ಸುಗಳ ಪ್ರವೇಶಾತಿ ನಿಯಮಗಳು, 2006ರ ನಿಯಮ 17ಕ್ಕೆ ಸೂಕ್ತ ತಿದ್ದುಪಡಿ ತರುವುದನ್ನು ಕಾಯ್ದಿರಿಸಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ ಕೌನ್ಸಿಲಿಂಗ್ ಮೂಲಕ ನಡೆಸಿ ತತ್ಸಮಾನ ಕೋರ್ಸುಗಳಿಗೆ ಹಂಚಿಕೆ ಮಾಡುವಂತೆ ಆದೇಶಿಸಲಾಗಿತ್ತು.

ಮುಂದುವರೆದು, ಸದರಿ ಆದೇಶದಲ್ಲಿ 2014–15ನೇ ಸಾಲಿಗೆ ಕರ್ನಾಟಕ ವೃತ್ತಿ ಶಿಕ್ಷಣ ಕೋರ್ಸುಗಳ ಪ್ರವೇಶಾತಿ ನಿಯಮಗಳು, 2006ಕ್ಕೆ ಸೂಕ್ತ ತಿದ್ದುಪಡಿ ತರುವುದನ್ನು ಕಾಯ್ದಿರಿಸಿ ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಪಿಟಿಷನ್ ಸಂಖ್ಯೆ:25265/2012 c/w ರಿಟ್ ಪಿಟಿಷನ್ ಸಂಖ್ಯೆ:25265/2009 ಮತ್ತು 27399/2010ರ ಮೇಲೆ ನೀಡಿರುವ ಆದೇಶದಂತೆ ಪ್ರಥಮ ವರ್ಷದ ಬಿ.ಇ. ಪ್ರವೇಶಾತಿ ನಂತರ

ACM
ಶಿ.ವಿ
05/03/2022

……2

ಖಾಲಿ ಉಳಿಯುವ ಸೀಟುಗಳನ್ನು ಬಿ.ಇ 2ನೇ ವರ್ಷದ/3ನೇ ಸೆಮಿಸ್ಟರ್‌ಗೆ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಆಡಳಿತ ಮಂಡಳಿಯವರು ಲ್ಯಾಟರಲ್ ಎಂಟ್ರಿ ಮೂಲಕ ಪ್ರಥಮವಾಗಿ ಡಿಪ್ಲೋಮಾಧಾರಕರುಗಳಿಗೆ ಸೀಟುಗಳನ್ನು ಹಂಚಿಕೆ ಮಾಡಿ ತದನಂತರ, ಉಳಿದ ಸೀಟುಗಳನ್ನು ಬಿ.ಎಸ್ಸಿ ಪದವೀಧರರಿಗೆ ಹಂಚಿಕೆ ಮಾಡಿಕೊಳ್ಳಲು ಅನುಮೋದನೆ ನೀಡಲಾಗಿತ್ತು.

1. ಲ್ಯಾಟರಲ್ ಎಂಟ್ರಿ ಪ್ರವೇಶಾತಿಗೆ ಸಂಬಂಧಿಸಿದಂತೆ ಖಾಸಗಿ ವೃತ್ತಿ ಶಿಕ್ಷಣ ಆಡಳಿತ ಮಂಡಳಿಗಳಲ್ಲಿ ಸ್ವೀಕೃತವಾಗುವ ಅರ್ಜಿಗಳನ್ನು ಪರಿಶೀಲನೆಗಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಕಳುಹಿಸುವುದು.
2. ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ನಿಯಮಗಳ ಪ್ರಕಾರ ಅರ್ಜಿಗಳನ್ನು ಪರಿಶೀಲಿಸಿ ಅರ್ಹತಾ ಪಟ್ಟಿಯನ್ನು ತಯಾರಿಸಿ ಸಂಬಂಧಪಟ್ಟ ಸಂಸ್ಥೆಗಳಿಗೆ ಕಳುಹಿಸುವುದು.
3. ಆಡಳಿತ ಮಂಡಳಿಯವರು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ತಯಾರಿಸಿದ ಅರ್ಹತಾ ಪಟ್ಟಿಯಂತೆ ವಿದ್ಯಾರ್ಥಿಗಳ ಪ್ರವೇಶಾತಿ ಮಾಡಿಕೊಳ್ಳುವುದು.
4. ಈ ರೀತಿಯ ಲ್ಯಾಟರಲ್ ಎಂಟ್ರಿ ಪ್ರವೇಶಾತಿಗೆ ಸರ್ಕಾರವು ನಿಗದಿಪಡಿಸಿದ ಶುಲ್ಕವನ್ನು ವಿಧಿಸುವುದು.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಪತ್ರದಲ್ಲಿ 2019-20ನೇ ಸಾಲಿಗೆ ಎಐಸಿಟಿಇ, ನವದೆಹಲಿರವರು ಲ್ಯಾಟರಲ್ ಎಂಟ್ರಿ ಮೂಲಕ **2**ನೇ ವರ್ಷದ/**3**ನೇ ಸೆಮಿಸ್ಟರ್ ಇಂಜಿನಿಯರಿಂಗ್ ಕೋರ್ಸುಗಳ ಪ್ರವೇಶಕ್ಕೆ ಅನುಮೋದಿತ ಇನ್‌ಟೇಕ್‌ನಲ್ಲಿ ಗರಿಷ್ಠ ಶೇಕಡ 10ರಷ್ಟು ಸೀಟುಗಳನ್ನು (up to a maximum of 10% of the "Approved Intake" which shall be over and above, Supernumerary to the approved intake, plus the unfilled vacancies of the First year) ಹಾಗೂ ಪ್ರಥಮ ವರ್ಷದಲ್ಲಿ ಖಾಲಿ ಉಳಿದ ಸೀಟುಗಳನ್ನು ಲ್ಯಾಟರಲ್ ಎಂಟ್ರಿ ಪ್ರವೇಶಾತಿಗೆ ಪರಿಗಣಿಸಲು ಅವಕಾಶ ಕಲ್ಪಿಸಿರುವುದನ್ನು ತಿಳಿಸಿ, ಈ ಹಿಂದೆ ಶೇ.20ರಷ್ಟು ಸೀಟುಗಳನ್ನು ಪರಿಗಣಿಸುವುದನ್ನು ಕೈಬಿಟ್ಟು, ಎಐಸಿಟಿಇ, ನವದೆಹಲಿರವರ ಅಪ್ರುವಲ್ ಪ್ರೋಸೆಸ್ ಹ್ಯಾಂಡ್ ಬುಕ್ ಅನ್ವಯ ಶೇ.10ರಷ್ಟು ಸೀಟುಗಳನ್ನು ಪ್ರವೇಶಾತಿಗೆ ಪರಿಗಣಿಸಲು ಆದೇಶಿಸಲಾಗಿದೆ.

2021-22ನೇ ಸಾಲಿಗೆ ಡಿಪ್ಲೋಮಾ ಅಭ್ಯರ್ಥಿಗಳಿಗೆ ಲ್ಯಾಟರಲ್ ಎಂಟ್ರಿ ಮೂಲಕ 2ನೇ ವರ್ಷದ/3ನೇ ಸೆಮಿಸ್ಟರ್ ಇಂಜಿನಿಯರಿಂಗ್ ಕೋರ್ಸುಗಳ ಪ್ರವೇಶಕ್ಕೆ ಸೀಟ್ ಮ್ಯಾಟ್ರಿಕ್ಸ್‌ನ್ನು ಪರೀಕ್ಷಾ ಪ್ರಾಧಿಕಾರಕ್ಕೆ ನೀಡಬೇಕಿರುತ್ತದೆ.

.......3

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಇಡಿ 36 ಡಿಟಿಇ 2022,**

**ಬೆಂಗಳೂರು, ದಿನಾಂಕ:04ನೇ ಮಾರ್ಚ್ 2022,**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2021–22ನೇ ಸಾಲಿಗೆ ಎಐಸಿಟಿಇ, ನವೆದಹಲಿ ರವರ ಮಾರ್ಗಸೂಚಿಯನ್ವಯ ಲ್ಯಾಟರಲ್ ಎಂಟ್ರಿ ಮೂಲಕ ಎರಡನೇ ವರ್ಷದ/ಮೂರನೇ ಸೆಮಿಸ್ಟರ್ ಇಂಜಿನಿಯರಿಂಗ್ ಕೋರ್ಸುಗಳ ಪ್ರವೇಶಕ್ಕೆ ಅನುಮೋದಿತ ಇನ್‌ಟೇಕ್‌ನಲ್ಲಿ ಗರಿಷ್ಠ ಶೇಕಡ 10ರಷ್ಟು ಸೀಟುಗಳನ್ನು (up to a maximum of 10% of the "Approved Intake" which shall be over and above, Supernumerary to the approved intake, plus the unfilled vacancies of the First year) ಹಾಗೂ ಪ್ರಥಮ ವರ್ಷದಲ್ಲಿ ಖಾಲಿ ಉಳಿದ ಸೀಟುಗಳನ್ನು ಲ್ಯಾಟರಲ್ ಎಂಟ್ರಿ ಪ್ರವೇಶಾತಿಗೆ ಪರಿಗಣಿಸಲು ಆದೇಶಿಸಿದೆ.

2021–22ನೇ ಸಾಲಿನಿಂದ ಲ್ಯಾಟರಲ್ ಎಂಟ್ರಿ ಮೂಲಕ ಬಿ.ಇ ಕೋರ್ಸುಗಳ 2ನೇ ವರ್ಷದ/3ನೇ ಸೆಮಿಸ್ಟರ್ (ಆರ್ಕಿಟೆಕ್ಚರ್ ಡಿಪ್ಲೋಮಾಧಾರಕರಿಗೆ ಪ್ರಥಮ ವರ್ಷದ ಬಿ.ಆರ್ಕಿಟೆಕ್ಚರ್ ಕೋರ್ಸಿಗೆ) ಪ್ರವೇಶಕ್ಕೆ ಸಂಬಂಧಿಸಿದಂತೆ ಅರ್ಹ ಡಿಪ್ಲೋಮಾ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಿ ಅಧಿಸೂಚನೆ ಹೊರಡಿಸಲು ಹಾಗೂ ಅರ್ಹ ಡಿಪ್ಲೋಮಾ ಅಭ್ಯರ್ಥಿಗಳಿಂದ ಅರ್ಜಿಯನ್ನು ನೇರವಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರವೇ ಪಡೆಯಲು ಆದೇಶಿಸಿದೆ.

ಡಿಪ್ಲೋಮಾಧಾರಕರುಗಳಿಗೆ ಸಿಇಟಿ ಪರೀಕ್ಷೆ ನಡೆಸಿ ಅಭ್ಯರ್ಥಿಯ ಅರ್ಹತಾ ಪರೀಕ್ಷೆ ಹಾಗೂ ಸಿಇಟಿಯಲ್ಲಿ ಪಡೆದ ಅಂಕಗಳನ್ನು ಸಮಾನವಾಗಿ ಪರಿಗಣಿಸಿ ಸರ್ಕಾರವು ಹೊರಡಿಸುವ ಸೀಟ್ ಮ್ಯಾಟ್ರಿಕ್ಸ್‌ರನ್ವಯ ಮೆರಿಟ್ ಪಟ್ಟಿ ತಯಾರಿಸಿ ಸೀಟು ಹಂಚಿಕೆ ಪ್ರಕ್ರಿಯೆಯನ್ನು ಮೀಸಲಾತಿಯನ್ವಯ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ ಕೌನ್ಸಿಲಿಂಗ್ ಮೂಲಕ ನಡೆಸಿ ತತ್ಸಮಾನ ಕೋರ್ಸುಗಳಿಗೆ ಹಂಚಿಕೆ ಮಾಡುವಂತೆ ಆದೇಶಿಸಿದೆ.

2020–21ನೇ ಸಾಲಿನಲ್ಲಿ ಪ್ರಥಮ ವರ್ಷದ ಬಿ.ಇ ಪ್ರವೇಶಾತಿ ನಂತರ ಖಾಲಿ ಉಳಿಯುವ ಸೀಟುಗಳನ್ನು 2021–22ನೇ ಸಾಲಿನ ಬಿ.ಇ 2ನೇ ವರ್ಷದ/3ನೇ ಸೆಮಿಸ್ಟರ್ ಆಡಳಿತ ಮಂಡಳಿಯವರು ಡಿಪ್ಲೋಮಾಧಾರಕರುಗಳಿಗೆ ಲ್ಯಾಟರಲ್ ಎಂಟ್ರಿ ಮೂಲಕ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ ಭರ್ತಿಯಾಗದೇ ಉಳಿದ ಸೀಟುಗಳನ್ನು ಪ್ರಥಮವಾಗಿ ಡಿಪ್ಲೋಮಾಧಾರಕರುಗಳಿಗೆ ಸೀಟುಗಳನ್ನು ಹಂಚಿಕೆ

......4

ಮಾಡಿ ತದನಂತರ, ಉಳಿದ ಸೀಟುಗಳನ್ನು ಬಿ.ಎಸ್ಸಿ ಪದವೀಧರರಿಗೆ ಹಂಚಿಕೆ ಮಾಡುವುದು. ಮುಂದುವರೆದು, ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಪಿಟಿಷನ್ ಸಂಖ್ಯೆ: 25265/2012 c/w ರಿಟ್ ಪಿಟಿಷನ್ ಸಂಖ್ಯೆ: 25265/2009 ಮತ್ತು 27399/2010ರ ಮೇಲೆ ನೀಡಿರುವ ಆದೇಶದಂತೆ ಪ್ರಥಮ ವರ್ಷದ ಬಿ.ಇ. ಪ್ರವೇಶಾತಿ ನಂತರ ಖಾಲಿ ಉಳಿಯುವ ಸೀಟುಗಳನ್ನು ಬಿ.ಇ. 2ನೇ ವರ್ಷದ 3ನೇ ಸೆಮಿಸ್ಟರ್‌ಗೆ ಆಡಳಿತ ಮಂಡಳಿಯವರು ಲ್ಯಾಟರಲ್ ಎಂಟ್ರಿ ಮೂಲಕ ಪ್ರಥಮವಾಗಿ ಡಿಪ್ಲೋಮಾಧಾರಕರುಗಳಿಗೆ ಸೀಟುಗಳನ್ನು ಹಂಚಿಕೆ ಮಾಡಿ ತದನಂತರ, ಉಳಿದ ಸೀಟುಗಳನ್ನು ಬಿ.ಎಸ್ಸಿ ಪದವೀಧರರಿಗೆ ಹಂಚಿಕೆ ಮಾಡಲು ಈ ಕೆಳಕಂಡ ಷರತ್ತುಗಳೊಂದಿಗೆ ಅನುಮೋದನೆ ನೀಡಲಾಗಿದೆ.

1. ಲ್ಯಾಟರಲ್ ಎಂಟ್ರಿ ಪ್ರವೇಶಾತಿಗೆ ಸಂಬಂಧಿಸಿದಂತೆ ಖಾಸಗಿ ವೃತ್ತಿ ಶಿಕ್ಷಣ ಆಡಳಿತ ಮಂಡಳಿಗಳಲ್ಲಿ ಸ್ವೀಕೃತವಾಗುವ ಅರ್ಜಿಗಳನ್ನು ಪರಿಶೀಲನೆಗಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಕಳುಹಿಸುವುದು.
2. ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ನಿಯಮಗಳ ಪ್ರಕಾರ ಅರ್ಜಿಗಳನ್ನು ಪರಿಶೀಲಿಸಿ ಅರ್ಹತಾ ಪಟ್ಟಿಯನ್ನು ತಯಾರಿಸಿ ಸಂಬಂಧಪಟ್ಟ ಸಂಸ್ಥೆಗಳಿಗೆ ಕಳುಹಿಸುವುದು.
3. ಆಡಳಿತ ಮಂಡಳಿಯವರು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ತಯಾರಿಸಿದ ಅರ್ಹತಾ ಪಟ್ಟಿಯಂತೆ ವಿದ್ಯಾರ್ಥಿಗಳ ಪ್ರವೇಶಾತಿ ಮಾಡಿಕೊಳ್ಳುವುದು.
4. ಈ ರೀತಿಯ ಲ್ಯಾಟರಲ್ ಎಂಟ್ರಿ ಪ್ರವೇಶಾತಿಗೆ ಸರ್ಕಾರವು ನಿಗದಿಪಡಿಸಿದ ಶುಲ್ಕವನ್ನು ವಿಧಿಸುವುದು.

ಈ ಸಂಬಂಧ ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ತಾಂತ್ರಿಕ ಶಿಕ್ಷಣ ನಿರ್ದೇಶನಾಲಯವು ಅಗತ್ಯ ಮಾಹಿತಿ/ದಾಖಲೆಗಳನ್ನು ನೀಡಿ ಸಹಕರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

A.C. Madhu 4/3/22

(ಮಧು ಎ.ಸಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ (ತಾಂತ್ರಿಕ).

<u>ಗೆ,</u>

1. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
2. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಮಲ್ಲೇಶ್ವರಂ, ಬೆಂಗಳೂರು.

.....5

3. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು–560 001.
4. ಸಂಬಂಧಪಟ್ಟ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಅನುದಾನರಹಿತ ಇಂಜಿನಿಯರಿಂಗ್ ಕಾಲೇಜುಗಳ/ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರುಗಳಿಗೆ (ತಾಂತ್ರಿಕ ಶಿಕ್ಷಣ ನಿರ್ದೇಶಕರ ಮುಖಾಂತರ)
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
6. ಸರ್ಕಾರದ ಉಪಕಾರ್ಯದರ್ಶಿ (ತಾಂತ್ರಿಕ ಮತ್ತು ಯೋಜನೆ), ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು.
7. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.